ಮುಗಿಸಿದ್ವಿ. ಆದ್ರೂ ಒಂದು ಸಲ ಚೆಕ್ ಮಾಡು" ಅಪ್ಪ ನಿಧಾನವಾಗಿ ಹೇಳಿದರು.

"ಸರಿ ಅಪ್ಪ" ಎಂದಳು ಸ್ರವಂತಿ.

ಆ ರಾತ್ರಿಯೆಲ್ಲಾ ಸ್ರವಂತಿಗೆ ನಿದ್ದೆಯ ಸುಳಿವಿಲ್ಲ. ಪದೇ ಪದೇ ಸಂಜೀವ್ ನೆನಪಾಗ್ತಾ ಇದ್ದರು. ಅವರು ಇಲ್ಲದ ಆಫೀಸಿನ ವಾತಾವರಣವನ್ನು ಊಹಿಸಿಕೊಳ್ಳಲೂ ಆಗುವುದಿಲ್ಲ. 'ಯಾವುದೇ ಒಂದು ಸಣ್ಣ ಸಹಾಯಕ್ಕೂ ಮುಂದಿರ್ತಾರೆ. ತುಂಬಾ ಕಾಳಜಿ ತೋರಿಸ್ತಾರೆ' ಎಂದುಕೊಳ್ಳುತ್ತಾ ಸಮಯ ನೋಡಿಕೊಂಡಾಗ ಆಗಲೇ ಹನ್ನೊಂದು ಗಂಟೆ.

ಯಾಕೋ ತುಂಬಾ ಡಿಸ್ಟರ್ಬ್ ಆಗುತ್ತಿದ್ದೇನೆನಿಸಿತು.

ಸಂಜೆ ಕಾಫಿ ಡೇನಿಂದ ಹೊರ ಬಂದು ಶೈಲಜಾಗೆ ಫೋನ್ ಮಾಡಿದಳು. "ಸಂಜೀವ್ ಟ್ರಾನ್ಸ್‌ಫರ್ ಮಾಡಿಸಿಕೊಳ್ತಿದ್ದಾರಾ?" ಎಂದು ಕೇಳಿದಳು.

"ಇಲ್ಲವಲ್ಲಾ" ಎಂದಳು ಶೈಲಜಾ. ಅಂದರೆ ಜೋಕ್ ಮಾಡುತ್ತಿದ್ದಾರಾ ಅಥವಾ ಹೆದರಿಸ್ತಾ ಇದ್ದಾರಾ? ಸಂಜೀವ್‌ಗೆ ಸುಳ್ಳು ಹೇಳೋ ಅಗತ್ಯ ಇಲ್ಲ ಅನಿಸಿತು. ಆದರೂ ಈ ರೀತಿ ಹೇಳಿದ್ದಾರೆಂದರೆ ಏನಾದರೊಂದು ದೃಢ ನಿರ್ಧಾರಕ್ಕೆ ಬಂದಿರಲೇ ಬೇಕು ಅನಿಸತೊಡಗಿತು ಸ್ರವಂತಿಗೆ.

ನಿಜಹೇಳಬೇಕೆಂದರೆ ರಾಮ್ ದೂರವಾದಾಗ ಕೂಡ ಮನಸ್ಸಿಗೆ ಇಷ್ಟೊಂದು ನೋವಾಗಿರಲಿಲ್ಲ. ನನ್ನ ಜೀವನಕ್ಕೆ ಇರೋ ಒಳ್ಳೆಯ ಸ್ನೇಹಿತ ಕೂಡ ದೂರವಾದ್ರೆ ನನ್ನ ನೋವು, ಕಷ್ಟಸುಖಗಳನ್ನು ಯಾರ ಹತ್ತಿರ ಹಂಚಿಕೊಳ್ಳಬೇಕು. ಓ ದೇವರೆ ಯಾಕೆ ಇದೆಲ್ಲಾ? ಪಕ್ಕದಲ್ಲಿ ಧರಣಿ ಪ್ರಶಾಂತವಾಗಿ ಮಲಗಿದ್ದಳು.

ಒಮ್ಮೆ ಧರಣಿಗೆ ಫಿಟ್ಸ್ ಬಂದಾಗ ಆಸ್ಪತ್ರೆಗೆ ಕರೆದುಕೊಂಡು ಹೋದಾಗ ಸಂಜೀವ್ ರಾತ್ರಿ ಹಗಲು ಧರಣಿ ಜೊತೆ ಇದ್ದು ಸಹಾಯ ಮಾಡಿದ್ದು, ಅಪ್ಪನಿಗೆ ಸೀರಿಯಸ್ ಆದಾಗ ಸಮಾಧಾನ ಮಾಡಿ ಧೈರ್ಯ ತುಂಬಿದ್ದು ನೆನಪಿಗೆ ಬಂತು. ಅಂದರೆ ಮಾನಸಿಕವಾಗಿ, ಆರ್ಥಿಕವಾಗಿ ಎಲ್ಲಾ ಹಂತದಲ್ಲೂ ನನ್ನ ಜೀವನಕ್ಕೆ ಬೇಕಾಗುವ ಒಬ್ಬ ಹಿತೈಶಿ. ಈ ದಿನಗಳಲ್ಲಿ ಯಾರಾದರೂ ಸಹಾಯ ಕೇಳಿದಾಗ ಒಂದಲ್ಲ, ಹತ್ತು ಸಲ ಯೋಚನೆ ಮಾಡುವ ಜನ ಇರುವಾಗ ಸಂಜೀವ್ ತುಂಬಾ ಒಳ್ಳೆಯವರು ಅನಿಸಿತು. ಹಾಗೆ ನೋಡಿದರೆ ಸಂಜೀವ್ ಶ್ರೀಮಂತರೇನೂ ಅಲ್ಲ. ಅವರದೂ ಮಧ್ಯಮವರ್ಗದ ಕುಟುಂಬ. ಬರುವ ಸಂಬಳದಲ್ಲಿ ಸುಖಮಯ ಜೀವನ. ಸ್ವಲ್ಪ ಮಟ್ಟಿಗೆ ಉಳಿತಾಯ. ಅದರಲ್ಲೂ ನನ್ನ ಸಲುವಾಗಿ ಎಂದರೆ ಯಾವ ತ್ಯಾಗಕ್ಕೂ ಹಿಂಜರಿಯದ ಮನುಷ್ಯ. ವಿಚಿತ್ರ ಅಂದರೆ ಸಂಜೀವ್ ಏನು ಮಾಡಿದರೂ ಶೈಲಜಾ ಪೂರ್ತಿ ಬೆಂಬಲ ಕೊಡುತ್ತಾಳೆ. ನನಗೂ ಒಳ್ಳೆಯ ಗೆಳತಿ.

''ಅಷ್ಟು ಹಣ ನನಗೋಸ್ಕರ ಖರ್ಚು ಮಾಡಿದ್ರೆ ನಿನಗೆ ಏನೂ ಅನಿಸೋದೆ ಇಲ್ಲವಾ?'' ಬಹಳಷ್ಟು ಸಲ ಕೇಳಿದೆ.

''ಅದು ಅವರು ಕಷ್ಟದಿಂದ ಸಂಪಾದಿಸಿದ ಹಣ. ಯಾವುದಕ್ಕೆ ಎಲ್ಲಿ ಖರ್ಚು ಮಾಡಬೇಕು ಎಂಬುದು ಅವರಿಗೆ ಗೊತ್ತು'' ಅಂದಾಗ ಶೈಲಜಾ ಮೇಲೆ ಮತ್ತಷ್ಟು ಗೌರವ ಹೆಚ್ಚಾಯಿತು. ಅವರದು ಎಷ್ಟೊಂದು ಅನ್ಯೋನ್ಯ ದಾಂಪತ್ಯ ಅನಿಸಿತು.

ಕೆಲವೊಮ್ಮೆ ರಾಮ್ ನೆನಪಾಗುತ್ತಾರೆ. ''ಮನೇಲಿ ಸುಮ್ಮನೆ ಕುಳಿತರೆ ಹೇಗೆ? ಏನಾದರೂ ಒಂದು ಕೆಲಸಕ್ಕೆ ಹೋಗು'' ಅಂತ ಪದೇ ಪದೇ ಹೇಳುತ್ತಿದ್ದರು. ''ವರದಕ್ಷಿಣೆ ಇಲ್ಲದೆ ಮಗಳಿಗೆ ಗಂಡು ಸಿಗಬೇಕು ಅನ್ನೋದು ನಿಮ್ಮಪ್ಪನಂತವರಿಗೆ ಆಸೆ.''